**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.422/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | ಅರುಣ ಇಟಗಿ | ಸಿಡಬ್ಲ್ಯೂ | 3 |
| ತಂದೆ ಹೆಸರು | ಸುಭಾಷಚಂದ್ರ | ಪಿಡಬ್ಲ್ಯೂ | 4 |
| ವಯಸ್ಸು | 29 ವರ್ಷ | | |
| ಉದ್ಯೋಗ | ಖಾಸಗಿ ಉದ್ಯೋಗಿ | | |
| ವಾಸಸ್ಥಳ | ಹಾವೇರಿ | | |

**ದಿಃ 06.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1). ಚಾ.ಸಾ-2 ಇವರ ಪರಿಚಯ ಇರುವದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇರುವದಿಲ್ಲ. ಸಾಕ್ಷಿಗೆ ದಿನಾಂಕಃ 05.11.2016 ರ ಸ್ಥಳ ಪಂಚನಾಮೆಯ ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದರಿಂದ ಸದರಿ ಸ್ಥಳ ಪಂಚನಾಮೆಯನ್ನು ನಿ.ಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು. ನಿ.ಪಿ-4 ಕ್ಕೆ ಎಲ್ಲಿ ಮತ್ತು ಯಾವಾಗ ಮತ್ತು ಯಾವ ಕಾರಣಕ್ಕಾಗಿ ಸಹಿ ಮಾಡಿದ್ದೇನೆ ಎಂದು ಹೇಳಲು ಆಗುವದಿಲ್ಲ ಹಾಗೂ ಅದರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.**

2) ನಿ.ಪಿ-4 ದಾಖಲಾತಿಯಲ್ಲಿ ಇರುವಂತಹ ಎಲ್ಲ ವಿಚಾರಗಳನ್ನು ಸಾಕ್ಷಿಗೆ ಓದಿ ಹೇಳಿ ಕೇಳಲಾಗಿ ಅದರಲ್ಲಿ ಬರೆದಿರುವಂತೆ ಆರೋಪಿಗಳು ಎಲ್ಲರೂ ಸೇರಿಕೊಂಡು ಸರ್ಕಾರಕ್ಕೆ ಆಹಾರ ಪಡಿತರ ವ್ಯವಸ್ಥೆಯಲ್ಲಿ 72,345/ ಗಳನ್ನು ಸರ್ಕಾರಕ್ಕೆ ನಷ್ಟವನ್ನುಂಟು ಮಾಡಲಾದ ಸ್ಥಳದಲ್ಲಿ ಜರುಗಿಸಲಾದ ನಿ.ಪಿ-4 ರಲ್ಲಿ

ಸಿ.ಡಬ್ಲೂ-3, ಪಿ.ಡಬ್ಲೂ-4

ಬರೆದ ಎಲ್ಲ ವಿಚಾರಗಳನ್ನು ತಿಳಿದುಕೊಂಡು ನಾನು ಮತ್ತು ಚಾ.ಸಾ-2 ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನನಗೆ ನಿ.ಪಿ-4 ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ .

**ಪಾಟೀ ಸವಾಲುಃ ಆರೋಪಿತರ ಪರವಾಗಿಃ ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.